


**ಈಳಿಗೆಮಣೆ, ತುರೆಮಣೆ ಎಂಬೆಲ್ಲ ಹೆಸರುಗಳಲ್ಲಿ ಕರೆಸಿಕೊಳ್ಳುವ ಮೆಟ್ಟುಗತ್ತಿಯ ಕುರಿತಾದ ಒಂದು ಆಪ್ತ ಲಹರಿ**

ಚಿತ್ರಗಳು: ಯತಿ ಸಿದ್ಧಕಟ್ಟೆ

ರಗಳೆ. ಏನೋ ಕಿರಿಕಿರಿ. ಅತೃಪ್ತಿ. ರಾಮನ ಬಂಟ ಹನುಮನಂತಿದ್ದ ತಮ್ಮ ಈ ಅಸಹನೆಗೆ ಪೂರ್ಣವಿರಾಮ ಹಾಕಿದ ದಿನ ಇವತ್ತಿಗೂ ನೆನಪಿದೆ. ಅಂದಾಜು ಮೂರು ಮೈಲಿ ನಡೆದು ಬಸ್ಸು ಹಿಡಿದು ಹಳ್ಳಿಯಿಂದ ಬಂದವನ ಕೈಲಿ ಚಳ್ಳೆಹುರಿಯಲ್ಲಿ ಬಾಯಿ ಕಟ್ಟಿಸಿಕೊಂಡ ದೊಡ್ಡ ಸೈಜಿನ ಗೋಣಿಚೀಲ. ಕಟ್ಟು ಬಿಚ್ಚಿದರೆ ಒಳಗೆ ಮೆಟ್ಟುಗತ್ತಿ. ನಮ್ಮ ಹಳ್ಳಿಯೇ ಮನೆಗೆ ಬಂದಂತೆ ಸಡಗರ. ತುದಿಗಾಲಲ್ಲಿ ಕೂರಬೇಕಾದ ಅವಶ್ಯಕತೆ ಇಲ್ಲದೆ ಆರಾಮಾಗಿ ಎಷ್ಟು ಹೊತ್ತು ಬೇಕಾದರೂ ಕೂತು ಬುಟ್ಟಿಗಟ್ಟಲೆ ತರಕಾರಿ ಸುಖವಾಗಿ ಹೆಚ್ಚಬಲ್ಲ ದೊಡ್ಡ ಮಣೆಗೆ ಅಳವಡಿಸಿದಂತಾ ಮೆಟ್ಟುಗತ್ತಿ. ಬಾಯ್ಬಿಟ್ಟು ಹೇಳುವ ಆವಶ್ಯಕತೆ ಇಲ್ಲದೆ ನನ್ನ ಇಷ್ಟಾನಿಷ್ಟಗಳ ಕುರಿತು ಕಾಳಜಿ ವಹಿಸುತ್ತಿದ್ದ ತಮ್ಮ ಬದುಕಿನ ಪ್ರವಾಹದಲ್ಲಿ ದೂರ ದೂರ ಸಾಗಿ ಹೋಗಿ ಅವನ ಪ್ರಪಂಚ ಕಟ್ಟಿಕೊಂಡಿದ್ದರೂ ಅವನು ಹೆಗಲ ಮೇಲೆ ಹೊತ್ತು ತಂದುಕೊಟ್ಟ ಮೆಟ್ಟುಗತ್ತಿ ಇವತ್ತಿಗೂ ಸುಸ್ಥಿತಿಯಲ್ಲಿದ್ದು ಅಡುಗೆಮನೆಯ ಮೂಲೆಯಲ್ಲಿ ವಿರಾಜಮಾನವಾಗಿದೆ. ಮತ್ತು 'ನಂಬಿದರೆ ನಂಬಿ, ಬಿಟ್ಟರೆ ಬಿಡಿ' ಅನ್ನುವಂತೆ ಇವತ್ತಿಗೂ ಮೆಟ್ಟುಗತ್ತಿಯ ಮೇಲೆ ಕೂತಾಗ ಅವನ ನೆನಪು ಆಗಿಯೇ ಆಗುತ್ತದೆ. ಕೆಲವೊಂದು ವಸ್ತುಗಳು, ಘಟನೆಗಳು, ಕೊನೆಗೆ ಯಾವತ್ತೋ ಆಡಿದ, ಕೇಳಿದ ಯಃಕಶ್ಚಿತ್ ಎನಿಸುವಂತಾ ಮಾತೂ ಕೂಡಾ ನೆನಪಿನಾಳದಲ್ಲಿ ಹೂತು ಹೋಗದೆ ಯಾಕೆ ಮನದ ಮೇಲ್ಪದರದಲ್ಲಿ ಗಿರಕಿ